ಅ) ಹೌದು, ಇನಾಂ ಜಮೀನುಗಳ ಮರು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ಅವಧಿಯನ್ನು ಕರ್ನಾಟಕ ಗ್ರಾಮ ಕಛೇರಿಗಳ ರದ್ದಿಯಾತಿ ಕಾಯ್ದೆ 1961 ಅಡಿಯಲ್ಲಿ ದಿನಾಂಕ : 01-3-1992 ರವರೆಗೆ ವಿಸ್ತರಿಸಲಾಗಿದೆ.

ಆ) ಇಲ್ಲ.

ಚಿಕ್ಕನಾಯಕನ ಹಳ್ಳಿಯಲ್ಲಿ ಡಿ.ಎಲ್.ಡಿ.ಬಿ.ಕಛೇರಿ ಆರಂಭ.

1557 (2128)ಶ್ರೀ ಜಿ.ಪಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ತೊರೆಹಳ್ಳಿ ವಾಟರ್‌ಶೆಡ್ (ಡಿಎಲ್‌ಡಿಬಿ) ಅನ್ನು ಸರ್ಕಾರ ಸರ್ವೆ ನಡೆಸಿ ಮಂಜೂರು ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾದುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಯಾವುದೇ ರೀತಿಯ ನೀರಾವರಿ ಅನುಕೂಲವಾಗದಂತಹ ಈ ಭಾಗಕ್ಕೆ ಕಡೆಯ ಪಕ್ಷ ವಾಟರ್‌ಶೆಡ್ ಕಾರ್ಯಕ್ರಮವನ್ನಾದರೂ ಆದ್ಯತೆಯ ಮೇರೆಗೆ ಮಾಡಲಾಗುವುದೇ;

ಇ) ಈ ಬಗ್ಗೆ ಚಿಕ್ಕನಾಯಕನಹಳ್ಳಿಯಲ್ಲಿ ಡಿ.ಎಲ್.ಡಿ.ಬಿ. ಕಛೇರಿಯನ್ನು ಯಾವಾಗ ಆರಂಭಿಸಲಾಗುವುದು ;

ಶ್ರೀ ಎನ್.ಚಿಕ್ಕೇಗೌಡ(ಕೃಷಿ ಸಚಿವರು)-

ಅ) ಹೌದು.

ಆ) ಪರಿಶೀಲಿಸಲಾಗುತ್ತದೆ.

ಇ) ಪರಿಶೀಲಿಸಲಾಗುತ್ತದೆ.

ರಾಜ್ಯದಲ್ಲಿ ಅರಣ್ಯ ಇಲಾಖೆ ಡಿ.ಎಲ್.ಡಿ.ಬಿ. ಯೋಜನೆಯಲ್ಲಿ ಖರ್ಚಾಗಿರುವ ಹಣ.

1558 (2130)ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ)

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಡಿ.ಎಲ್.ಡಿ.ಬಿ. ಇಲಾಖೆಗೆ ರಾಜ್ಯದಲ್ಲಿ ಖರ್ಚಾಗುತ್ತಿರುವ ಹಣವೆಷ್ಟು ;

ಆ) 1990-91, 91-92ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಡಿ.ಎಲ್.ಡಿ.ಬಿ.ಗೆ ಅಭಿವೃದ್ಧಿಗೆಂದು ನೀಡಿರುವ ಹಣವೆಷ್ಟು.

ಇ) 1990-91, 91-92ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಡಿ.ಎಲ್.ಡಿ.ಬಿ.ಯಿಂದ ಬಂದಿರುವ ಬೇಡಿಕೆ ಪೊತ್ತ ಎಷ್ಟು ;

ಈ) ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಡಿ.ಎಲ್.ಡಿ.ಬಿ.ಯಿಂದ ಬಂದಿರುವ ಬೇಡಿಕೆ ಎಷ್ಟು ಹಾಗು ಎಷ್ಟನ್ನು ನೀಡಲಾಗಿದೆ ;

ಉ) ನಾಗಮಂಗಲ ತಾಲ್ಲೂಕಿನ ಹಿಡುಗ-ದಿಡುಗ ಯೋಜನೆಗೆ ಸರ್ಕಾರ ಒಪ್ಪಿಗೆ ನೀಡಿದೆಯೇ?

ಶ್ರೀ ಎನ್.ಚಿಕ್ಕೇಗೌಡ (ಕೃಷಿ ಸಚಿವರು)-

ಅ) ಡಿ.ಎಲ್.ಡಿ.ಬಿ.ಗೆ 90-91 ಮತ್ತು 91-92ನೇ ಸಾಲಿನಲ್ಲಿ ಖರ್ಚಾದ ಹಣದ ವಿವರ ಕೆಳಕಂಡಂತಿದೆ. (ಕಾಮಗಾರಿ ಸಿಬ್ಬಂದಿ)

90-91 865.80 ಲಕ್ಷ ರೂ.ಗಳು

91-92 472.62 ಲಕ್ಷ ರೂ.ಗಳು (ಫೆಬ್ರುವರಿ 92ರವರೆಗೆ)

ಆ) ಡಿ.ಎಲ್.ಡಿ.ಬಿ. ಇಲಾಖೆಗೆ ಅಭಿವೃದ್ಧಿಗೆಂದು 90-91ನೇ ಸಾಲಿನಲ್ಲಿ 564.64 ಲಕ್ಷ ರೂ.ಗಳನ್ನು ಹಾಗೂ 91-92ನೇ ಸಾಲಿನಲ್ಲಿ 180.00 ಲಕ್ಷ ರೂ.ಗಳನ್ನು ಫೆಬ್ರುವರಿ